ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂ: ಬಿ12(5)/ಪಿಆರ್/35/2020-21 ದಿನಾಂಕ: 21-09-2020 ರಂತೆ ದಿನಾಂಕ: 20-11-2021 ರಂದು ಹಗದೂರು ವಾರ್ಡ್ ಸಂ: 84ರ ವಾರ್ಡ್ ಕಮಿಟಿ ಸಭೆಯನ್ನು ವಾರ್ಡ್ ಕಛೇರಿ-ಹಗದೂರು ಇಲ್ಲಿ ಶ್ರೀ.ಚಂದ್ರಮೋಹನ್, ಸಹಾಯಕ ಕಾರ್ಯಪಾಕ ಅಭಿಯಂತರರು ಹಾಗೂ ನೋಡಲ್ ಅಧಿಕಾರಿಗಳು, ರವರ ಅಧ್ಯಕ್ಷತೆಯಲ್ಲಿ ನಡೆದಿರುವ ಸಭೆಯ ನಡುವಳಿಗಳು:

**ಈ ಕೆಳಕಂಡ ಸದಸ್ಯರು ಹಾಗೂ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿರುತ್ತಾರೆ**

1. ಶ್ರೀ.ಚಂದ್ರಮೋಹನ್, ಸಹಾಯಕ ಕಾರ್ಯಪಾಕ ಅಭಿಯಂತರರು, ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು.
2. ಶ್ರೀ.ಶಶಿಧರ್, ಸಹಾಯಕ ಕಾರ್ಯಪಾಕ ಅಭಿಯಂತರರು, ರ.ಮೂ.ಭೂ.ಸೌ_ಬಿಬಿಎಂಪಿ.
3. ಶ್ರೀ.ಬಸವರಾಜ್.ಕೆ.ಟಕ್ಕಳಕಿ, ಸಹಾಯಕ ಅಭಿಯಂತರರು ಮತ್ತು ಕಾರ್ಯದರ್ಶಿ.
4. ಡಾ॥ ಸನಾ, ವೈಧ್ಯಾಧಿಕಾರಿಗಳು ಹಗದೂರು ಆರೋಗ್ಯ ಕೇಂದ್ರ
5. ಡಾ॥ ಸುಮತಿ, ವೈಧ್ಯಾಧಿಕಾರಿಗಳು ಸಿದ್ದಾಪುರ ಆರೋಗ್ಯ ಕೇಂದ್ರ
6. ಶ್ರೀ.ಪ್ರಕಾಶ್, ಹಿರಿಯ ಆರೋಗ್ಯ ನಿರೀಕ್ಷಕರರು ಶ್ರೀ.ಸೋಮಶೇಖರ್ ಕಿರಿಯ ಆರೋಗ್ಯ ನಿರೀಕ್ಷಕರರು, ವಾರ್ಡ್ ನಂ: 84 ಹಗದೂರು, ಬಿ.ಬಿ.ಎಂ.ಪಿ
7. ಶ್ರೀ.ಸುಧಾಕರರ್ ಮತ್ತು ಶ್ರೀ.ಶಿವಕುಮಾರ್, ಆರೋಗ್ಯ ಸಹಾಯಕರು, ಆರೋಗ್ಯ ಕೇಂದ್ರ
8. ಶ್ರೀ.ರವಿಚಂದ್ರ, ಸಹಾಯಕ ಅಭಿಯಂತರರು, (ರ.ಮೂ.ಭೂ.ಸೌ_ಬಿಬಿಎಂಪಿ)
9. ಹಗದೂರು ವಾರ್ಡಿನ ಶಕ್ತಿಕೇಂದ್ರದವರು ಹಾಗೂ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದವರು ಮತ್ತು ಸಾರ್ವಜನಿಕರು

1. ಹಿಂದಿನ ಸಭೆಯಲ್ಲಿ ಚರ್ಚಿಸಲಾದ ವಿಷಯಗಳು ಮತ್ತು ದೂರುಗಳ ಬಗ್ಗೆ ಕೈಗೊಂಡಿರುವ ಕ್ರಮದ ಬಗ್ಗೆ ಚರ್ಚಿಸಲಾಯಿತು.

2. ವಿಜಯನಗರ_ ದೊಮ್ಮರಪಾಳ್ಯ ಬೋರ್‌ವೆಲ್ ಮೋಟಾರು ರಿಪೇರಿ ಮಾಡಿಸಿ, ವಿಜಯನಗರಕ್ಕೆ ನೀರು ಸರಬರಾಜು ಮಾಡುವುದು.

3. ವಿಜಯನಗರ_ ಸ್ಮಶಾನದ ಮೋಟಾರ್ ರಿಪೇರಿ ಮಾಡಬೇಕು, ದೊಮ್ಮರಪಾಳ್ಯದ ಮೋಟಾರ್ ರಿಪೇರಿ ಮಾಡಿಸಿ, ಪೈಪ್‌ಲೈನ್ ರಿಪೇರಿ ಮಾಡಿಸುವುದು. ಬಿಬಿಎಂಪಿ

4. ಸಿದ್ದಾಪುರ_ ಸಿದ್ದಾಪುರ ಗ್ರಾಮದ ಮೋಟಾರು ರಿಪೇರಿ ಯಾಗಬೇಕಾಗಿದ್ದು, ಕೂಡಲೇ ರಿಪೇರಿ ಮಾಡಿಸುವುದು.

5. ಸಿದ್ದಾಪುರ_ ಸಿದ್ದಾಪುರ ಬೋರ್‌ವೆಲ್ ಹತ್ತಿರ ಪ್ಯಾನ್ಯೆಲ್ ಬೋರ್ಡ್ ರಿಪೇರಿ ಮಾಡಿಸುವುದು. ಬಿಬಿಎಂಪಿ.

6. ಇಮ್ಮಡಿಹಳ್ಳಿ_ 04 ಮೋಟಾರುಗಳು ರಿಪೇರಿ ಮಾಡಿ, ನೀರು ಸರಬರಾಜು ಮಾಡಬೇಕಾಗಿದ್ದು, ಕೂಡಲೇ ಎಲ್ಲಾ ಮೋಟಾರು ರಿಪೇರಿ ಮಾಡಿಸಿ, ನೀರು ಸರಬರಾಜು ಮಾಡುವುದು.

7. ನಾಗೊಂಡನಹಳ್ಳಿ_ ನಾಗೊಂಡನಹಳ್ಳಿ ಗ್ರಾಮದಲ್ಲಿ ನೀರಿನ ತೊಂದರೆ, ತೀವ್ರವಾಗಿದ್ದು ಕೂಡಲೇ ಪೈಪ್‌ಲೈನ್ ಹಾಗೂ ವಾಲ್‌ಗಳು ಕೆಟ್ಟು ಹೋಗಿದ್ದು, ಗ್ರಾಮಸ್ಥರಿಗೆ ಸರಿಯಾಗಿ ನೀರು ಬರುವಂತೆ ಹಾಗೂ ಈಗಾಗಲೇ ಇದ್ದ ವಾಟರ್‌ಮ್ಯಾನ್ ಗುಂಡಪ್ಪನ ಬದಲಾವಣೆ ಮಾಡುವುದು. ಬಿಬಿಎಂಪಿ

8. ರಾಮಗೊಂಡನಹಳ್ಳಿ_ ನೀರಿನ ಪೈಪ್‌ಲೈನ್ ರಿಪೇರಿ ಹಾಗೂ ಪ್ಯಾನೆಲ್ ಬೋರ್ಡ್ ರಿಪೇರಿ ಮಾಡಿಸುವುದು. ಬಿಬಿಎಂಪಿ

9. ಸಿದ್ದಾಪುರ_ ಮೋಟಾರು ರಿಪೇರಿ/ಗ್ಯಾಸ್ ಲೈನ್/ಪ್ಯಾನೆಲ್ ಬೋಡ್ ರಿಪೇರಿ ಮಾಡಿಸುವುದು. ಹೊಸದಾಗಿ ಲೈಟ್‌ಗಳನ್ನು ಹಾಕಿಸುವುದು ಮತ್ತು ಗ್ರಾಮದಲ್ಲಿ ಡ್ರೈನ್‌ಗಳಲ್ಲಿ ಸಿಲ್ಟ್ ತುಂಬಿದ್ದು, ಕೂಡಲೇ ಸ್ವಚ್ಛತೆ ಮಾಡಿಸುವುದು. ಬಿಬಿಎಂಪಿ

10. ವಿಜಯನಗರ– ನಾಗರಾಜಪ್ಪ ಬಡಾವಣೆಯಲ್ಲಿ ಡ್ರೈನ್‌ಗಳಲ್ಲಿ ಹೂಳು ತೆಗೆಯುವುದು ಹೊಸದಾಗಿ ರಸ್ತೆ ಮಾಡಿಸುವುದು.

11. ನಲ್ಲೂರಹಳ್ಳಿ– ನಲ್ಲೂರಹಳ್ಳಿಯ ಮುಖ್ಯರಸ್ತೆಯ ರಿಪೇರಿ ಕಾರ್ಯ/ಹಾಗೂ ಚರಂಡಿ ರಿಪೇರಿ ಕಾರ್ಯ ಶೀಘ್ರದಲ್ಲಿ ಮಾಡಿಸುವುದು.

12. ಗಾಂಧೀಪುರ– ಗಾಂಧೀಪುರ 2ನೇ, 5ನೇ ಮತ್ತು 4ನೇ ಕ್ರಾಸ್‌ನಲ್ಲಿ ಹಳೆಯ ಮನೆಗಳು ಮಳೆಯಿಂದ ಹಾನಿಯಾದ ಬಡವರಿಗೆ, ಇದಕ್ಕೆ ಅನುದಾನ ಕೊಡಿಸುವುದು.

13. ಗಾಂಧೀಪುರ– ಸುಟ್ಟು ಹೋದ ಮೋಟಾರುಗಳನ್ನು ಕೂಡಲೇ ರಿಪೇರಿ ಮಾಡಿಸುವುದು. ಪೈಪ್‌ಲೈನ್ ರಿಪೇರಿ ಮಾಡಿಡುವುದು ವಾಟರ್‌ಮ್ಯಾನ್ ಶಿಂತಶಿವ ಬದಲಾವಣೆ ಮಾಡುವುದು.

14. ಗಾಂಧೀಪುರ– 3ನೇ ಕ್ರಾಸ್‌ನಲ್ಲಿ ಯು.ಜಿ.ಡಿ. ಸಂಪರ್ಕ ಮಾಡಬೇಕಾಗಿದೆ.

15. ಇಮ್ಮಡಿಹಳ್ಳಿ– ಇಮ್ಮಡಿಹಳ್ಳಿಯ ಕೆಟ್ಟುಹೋದ ರಸ್ತೆಗಳು ರಿಪೇರಿ ಹಾಗೂ ಹೊಸ ರಸ್ತೆ ನಿರ್ಮಾಣ ಕಾರ್ಯಕೂಡಲೇ ಕೈಗೊಳ್ಳುವುದು. ಹೊಸ ಎಕ್ಸ್‌ಟೆನ್ಷನ್‌ಗೆ ಪೈಪ್‌ಲೈನ್ ಮಾಡಿಸುವುದು. ತೇರು ಬೀದಿ ರಸ್ತೆ, ರಿಪೇರಿ ಕೆಲಸ ಮಾಡಿಸುವುದು.

**ವಾರ್ಡ್ ಕಮಿಟಿ ನೋಡಲ್ ಅಧಿಕಾರಿ ಮತ್ತು ಕಾರ್ಯದರ್ಶಿಗಳು, ನೌಕರರು, ಪದಾಧಿಕಾರಿಗಳು ಹಾಗೂ ಸಾರ್ವಜನಿಕರು ಈ ಮೇಲ್ಕಂಡಂತೆ ತಿಳಿಸಿರುವ ಸಭೆಯಲ್ಲಿ ಕೈಗೊಂಡ ತೀರ್ಮಾನದಂತೆ ಹಾಗೂ ನಿರ್ಣಯಗಳಂತೆ ಹಗದೂರು ವಾರ್ಡ್ ನಂ:84 ವ್ಯಾಪ್ತಿಯಲ್ಲಿ ಕೆಲಸ ಕಾರ್ಯಗಳನ್ನು ಆಧ್ಯತೆ ಮೇರೆಗೆ ನಿರ್ವಹಿಸಲು ಸೂಚಿಸಲಾಯಿತು**

ಹಗದೂರು ವಾರ್ಡ ನಂ:84 ರ ವಾರ್ಡ್ ಕಮಿಟಿಯ ಕಾರ್ಯದರ್ಶಿಯವರಾದ ಶ್ರೀ.ಚಂದ್ರಮೋಹನ್, ಸಹಾಯಕ ಕಾರ್ಯಪಾಕ ಅಭಿಯಂತರರು ಹಾಗೂ ನೊಡಲ್ ಅಧಿಕಾರಿಗಳು, ರವರು ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ ಕಾರ್ಯನಿರ್ವಹಿಸಲು ಕೋರುತ್ತಾ, ವಂದನಾರ್ಪಣೆಯನ್ನು ಸಲ್ಲಿಸಿ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ಕಾರ್ಯದರ್ಶಿ**
**ಸಹಾಯಕ ಅಭಿಯಂತರರು**
**ವಾರ್ಡ್ ನಂ: 84 ಹಗದೂರು**

**ಪ್ರತಿಯನ್ನು**

1. ಮಾನ್ಯ ಜಂಟಿ ಆಯುಕ್ತರು, ಬಿ.ಬಿ.ಎಂ.ಪಿ ಮಹದೇವಪುರ ವಲಯ,ರವರ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಮುಖ್ಯ ಅಭಿಯಂತರರು, ಬಿ.ಬಿ.ಎಂ.ಪಿ ಮಹದೇವಪುರ ವಲಯ,ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಮಾನ್ಯ ಡಿ.ಹೆಚ್.ಓ ಬಿ.ಬಿ.ಎಂ.ಪಿ ಮಹದೇವಪುರ ವಲಯ,ರವರ ಮಾಹಿತಿಗಾಗಿ ಸಲ್ಲಿಸಿದೆ.
4. ಎಲ್ಲಾ ಅಧಿಕಾರಿ ಸಿಬ್ಬಂದಿಗಳ ಕ್ರಮಕ್ಕಾಗಿ.
5. ಎಲ್ಲಾ ಕಮಿಟಿ ಸದಸ್ಯರುಗಳ ಮಾಹಿತಿಗಾಗಿ ಸಲ್ಲಿಸಿದೆ.
6. ಕಛೇರಿ ಪ್ರತಿ.